ಅ) ಸಿಸಿ, ಯಲ್ಲಾಪುರ, ಅಂಕೋಲ ತಾಲ್ಲೂಕಿನಲ್ಲಿ ಒಟ್ಟು 7 ಸ್ಥಳಗಳನ್ನು ಪ್ರವಾಸೋದ್ಯಮ ನೀತಿಯಲ್ಲಿ ಗುರ್ತಿಸಲಾಗಿದೆ. ಈ ಸ್ಥಳಗಳ ಅಭಿವೃದ್ಧಿಗಾಗಿ ಇಲಾಖೆಯು ಸೊಂಡದಲ್ಲಿ ಪ್ರವಾಸಿ ಸೌಲಭ್ಯ ನಿರ್ಮಾಣಕ್ಕಾಗಿ 1993-94ರಲ್ಲಿ ರೂ. 2.00 ಲಕ್ಷ (ಎರಡು ಲಕ್ಷ)ಗಳನ್ನು ಬನವಾಸಿಯಲ್ಲಿ ಪ್ರವಾಸಿ ಸೌಲಭ್ಯ ನಿರ್ಮಾಣಕ್ಕಾಗಿ ರೂ. 10.00 ಲಕ್ಷಗಳನ್ನು 1992-93ರಲ್ಲಿ, ಒದಗಿಸಲಾಗಿದೆ. ಕದಂಬ ಮಹಾದ್ವಾರ ನಿರ್ಮಾಣಕ್ಕಾಗಿ 1994-95ರಲ್ಲಿ ಒಂದು ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಆ) ಇಲ್ಲ.

**ಒಳನಾಡು ಮೀನುಗಾರಿಕೆ ಮಾರುಕಟ್ಟೆ ಬಲವರ್ಧನ ಯೋಜನೆ**

501 - ಶ್ರೀ ವಸಂತ ವಿ. ಸಾಲಿಯಾನ್ (ಕಾಪು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಒಳನಾಡು ಮೀನುಗಾರಿಕೆ ಮಾರುಕಟ್ಟೆ ಬಲವರ್ಧನ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಮಂಜೂರಾತಿಯಾದ ಹಣ ಎಷ್ಟು?*

*ಆ) ಇಲ್ಲಿಯವರೆಗೆ ಆಗಿರುವ ವೆಚ್ಚವೆಷ್ಟು? ಪ್ರಗತಿ ಕುಂಠಿತವಾಗಿದ್ದರೆ ಸರಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಕೆ. ಜಯಕುಮಾರ್ ಹೆಗ್ಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಯೋಜನೆಯಲ್ಲಿ ಒಟ್ಟು ಮಂಜೂರಾದ ರೂ. 98.00 ಲಕ್ಷಗಳಲ್ಲಿ ರೂ.40.00 ಲಕ್ಷಗಳನ್ನು 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.

ಆ) ರೂ. 8.61 ಲಕ್ಷಗಳು ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದ ಹಾಲು ಶೀಥಲೀಕರಣ ಘಟಕ**

559 - ಶ್ರೀ ಬಿ.ಎಸ್ ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದ ಹಾಲು ಶೀಥಲೀಕರಣ ಘಟಕ (ಚಿಲ್ಲಿಂಗ್ ಸೆಂಟರ್) ಪ್ರಾರಂಭಿಸಿದ್ದು ಯಾವಾಗ; ಮತ್ತು ಇದಕ್ಕೆ ಎಷ್ಟು ಖರ್ಚು ಮಾಡಲಾಗಿದೆ;*

*ಆ) ಈ ಘಟಕ ಈಗ ಕಾರ್ಯ ನಿರ್ವಹಿಸುತ್ತಿದೆಯೇ ಹಾಗಿಲ್ಲದಿದ್ದಲ್ಲಿ ಕಾರಣಗಳೇನು?*

*ಇ) ಈ ಘಟಕದ ಯಂತ್ರೋಪಕರಣಗಳನ್ನು ಪೂರ್ತಿ ಬದಲಾಯಿಸಿ ಹೊಸ ಯಂತ್ರಗಳನ್ನು ಅಳವಡಿಸಲಾಗುವುದೆ?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ದಿನಾಂಕ 18-11-1988ರಂದು ಇದಕ್ಕೆ ರೂ. 9.90 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಇಲ್ಲ. ಈ ಕೇಂದ್ರದ ಮಾರ್ಗದಲ್ಲಿ ಶೇಖರಣೆಯಾಗುತ್ತಿದ್ದ ಹಾಲಿನ ಪ್ರಮಾಣವು ಅತೀ ಕಡಿಮೆ ಇದ್ದು ಸಾಗಾಣಿಕೆ ಮತ್ತು ನಿರ್ವಹಣಾ ವೆಚ್ಚ ಅಧಿಕವಾಗಿದ್ದು ಆರ್ಥಿಕವಾಗಿ ನಷ್ಟ ಅನುಭವಿಸುತ್ತಿದ್ದ ಕಾರಣ ಸದರಿ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಯಿತು.